# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1121** |
| ಉತ್ತರಿಸಬೇಕಾದ ದಿನಾಂಕ | : | 28.12.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಿರ್ಮಿತಿ ಕೇಂದ್ರಗಳ ಯೋಜನಾ ನಿರ್ದೇಶಕರ (ಪ್ರಾಜೆಕ್ಟ್ ಡೈರಕ್ಟರ್) ಕಾಲಾವಧಿ ಎಷ್ಟು; | ಯೋಜನಾ ನಿರ್ದೇಶಕರ (ಪ್ರಾಜೆಕ್ಟ್ ಡೈರೆಕ್ಟರ್) ಕಾಲಾವಧಿಯು ನಿರ್ಮಿತಿ ಕೇಂದ್ರದ ಬೈಲಾ ಹಾಗೂ ಆಡಳಿತ ಮಂಡಳಿಯ ಸಭೆಯ ನಿರ್ಣಯದಂತೆ 60 ವರ್ಷಗಳ ವಯೋಮಿತಿ ಕಾಲಾವಧಿ ಇರುತ್ತದೆ. |
| ಆ) | ಡ್ರಾಯಿಂಗ್ ಪವರ್ ಎಷ್ಟು ಅವಧಿಯವರೆಗೆ ಇದೆ; | ಡ್ರಾಯಿಂಗ್ ಪವರ್ ನ ಅವಧಿಯು 58 ವರ್ಷಗಳ ಸೇವಾಧಿಯವರೆಗೆ ಇರುತ್ತದೆ. |
| ಇ) | ಮಂಡ್ಯದ ನಿರ್ಮಿತಿ ಕೇಂದ್ರಗಳ ಯೋಜನಾ ನಿರ್ದೇಶಕರ (ಪ್ರಾಜೆಕ್ಟ್ ಡೈರಕ್ಟರ್) ಡ್ರಾಯಿಂಗ್ ಪವರ್ ಕಾಲಾವಧಿ ಮುಗಿದಿದ್ದರೂ ಚೆಕ್ ಡ್ರಾಯಿಂಗ್‌ಗೆ ಸಹಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಯೋಜನಾ ನಿರ್ದೇಶಕರ (ಪ್ರಾಜೆಕ್ಟ್ ಡೈರೆಕ್ಟರ್) ನೇಮಕಾತಿ ಪ್ರಕ್ರಿಯೆಯು ದಿನಾಂಕ 26.09.2022 ರಲ್ಲಿ ಪ್ರಾರಂಭಿಸಲಾಗಿದ್ದು, ಸದರಿ ನೇಮಕಾತಿ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಿಂದ ದಿನಾಂಕ: 21.10.2022 ರಲ್ಲಿ ರಿಟ್ ಪಿಟಿಷನ್ ಸಂಖ್ಯೆ 20974/2022 ರ ಪ್ರಕರಣದಲ್ಲಿ ತಡೆಯಾಜ್ಞೆ ಇರುತ್ತದೆ. |
| ಈ) | ಈ ಸಂಬಂಧ ತೆಗೆದುಕೊಂಡ ಕ್ರಮಗಳೇನು; | ಈ ಸಂಬಂಧ ನೇಮಕಾತಿ ಪ್ರಕ್ರಿಯೆಗೆ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ, ಸದರಿ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲಾಗಿದ್ದು, ಪ್ರಸ್ತುತ ಹಾಲಿ ಕಾರ್ಯನಿರ್ವಹಿಸುತ್ತಿರುವ ಯೋಜನಾ ವ್ಯವಸ್ಥಾಪಕರೇ ಸದರಿ ಹುದ್ದೆಯಲ್ಲಿ ಯಥಾವತ್ತಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಉ) | ಈ ಅಧಿಕಾರಿಯು ಈ ಹಿಂದೆ ಅಮಾನತ್ತುಗೊಂಡಿದ್ದು, ಅವರ ಸೇವೆಯನ್ನು ಸಕ್ರಮಗೊಳಿಸದ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು ? (ಆದೇಶದ ಪ್ರತಿಯೊಂದಿಗೆ ಮಾಹಿತಿ ನೀಡುವುದು) | ಈ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟೀಷನ್ ಸಂಖ್ಯೆ: 21917/2015, ದಿನಾಂಕ: 22.01.2016 ರಲ್ಲಿ ನೀಡಿರುವ ಆದೇಶದನ್ವಯ ಪರಿಗಣಿಸಿ, ದಿನಾಂಕ: 16.03.2016 ರಂದು ನಡೆದ ನಿರ್ಮಿತಿ ಕೇಂದ್ರದ ಆಡಳಿತ ಮಂಡಳಿ ಸಭೆಯ ವಿಷಯ-2 ರಲ್ಲಿನ ತೀರ್ಮಾನದಂತೆ ಕ್ರಮ ವಹಿಸಲಾಗಿದೆ. ಸದರಿ ತಿರ್ಮಾನದ ನಡವಳಿಯ ಪ್ರತಿಯನ್ನು ಒದಗಿಸಲಾಗಿದೆ. |

ಸಂಖ್ಯೆ :ವಇ 572 ಹೆಚ್‌ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು